ಪತ್ರಿಕಾ ತುಣುಕುಗಳು
**PAPER CLIPPINGS**

16

ಇಲಾಖೆ / ವಿಷಯ : DEPARTMENT / SUBJECT: ಕೃಷಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 29-10-20

# ತರಕಾರಿಗೆ ಬೆಂಬಲ ಬೆಲೆ: ನಮ್ಮ ರಾಜ್ಯದಲ್ಲೂ ಅಧ್ಯಯನ ಯೋಗ್ಯ

29/10/20

ಕೇರಳ ಸರ್ಕಾರ ನಮ್ಮ ದೇಶದಲ್ಲೇ ಮೊದಲ ಬಾರಿ ತರಕಾರಿಗೂ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸುವ ವ್ಯವಸ್ಥೆಯನ್ನು ತಂದಿದೆ. ಸದ್ಯ ದೇಶದಲ್ಲಿ ಕೇಂದ್ರ ಸರ್ಕಾರದ ಸಹಯೋಗದಲ್ಲಿ ಆಹಾರ ಧಾನ್ಯಗಳಿಗೆ ಮಾತ್ರ ಕನಿಷ್ಠ ಬೆಂಬಲ ಬೆಲೆ ನೀಡುವ ವ್ಯವಸ್ಥೆಯಿದೆ. ಪ್ರತಿ ವರ್ಷ 23 ರೀತಿಯ ಆಹಾರ ಧಾನ್ಯಗಳಿಗೆ ಕೇಂದ್ರ ಸರ್ಕಾರ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸುತ್ತದೆ. ನಂತರ ರಾಜ್ಯ ಸರ್ಕಾರಗಳೂ ಅದಕ್ಕೆ ತಮ್ಮ ಕೈಯಿಂದ ಸ್ವಲ್ಪ ಸೇರಿಸಿ, ಆಹಾರ ಧಾನ್ಯಗಳ ಬೆಲೆ ಮಾರುಕಟ್ಟೆಯಲ್ಲಿ ಕುಸಿತವಾದರೆ ರೈತರಿಂದ ಅವುಗಳನ್ನು ಖರೀದಿಸಲು ಕೇಂದ್ರಗಳನ್ನು ತೆರೆಯುವ ಮೂಲಕ ನೆರವಿಗೆ ಧಾವಿಸುತ್ತವೆ. ಇನ್ನು ಆಪತ್ಕಾಲಕ್ಕೆ ಬೇಕಾಗುತ್ತದೆಯೆಂದು ಸರ್ಕಾರ ದಾಸ್ತಾನು ಮಾಡುವುದಕ್ಕೆ ಮತ್ತು ಪಡಿತರ ಯೋಜನೆಯಡಿ ವಿತರಿಸುವುದಕ್ಕೂ ಇದೇ ಬೆಲೆಯಲ್ಲಿ ರೈತರಿಂದ ಆಹಾರ ಧಾನ್ಯಗಳನ್ನು ಖರೀದಿಸುತ್ತದೆ. ಇದರಿಂದಾಗಿ ಆಹಾರ ಧಾನ್ಯಗಳಿಗೆ ಬೆಲೆಯಿಲ್ಲದೆ ರಸ್ತೆ ಅಥವಾ ಚರಂಡಿಗೆ ಚೆಲ್ಲುವ ಪ್ರಮೇಯ ರೈತರಿಗೆ ಬರುವುದಿಲ್ಲ. ಜೊತೆಗೆ, ಈ ಧಾನ್ಯಗಳ ಬೆಲೆ ವಿಪರೀತ ದುಬಾರಿಯಾದಾಗ ಅಥವಾ ಮಾರಾಟಗಾರರು ಕೃತಕ ಅಭಾವ ಸೃಷ್ಟಿಸಿ ಮಾರುಕಟ್ಟೆಯಲ್ಲಿ ಆಡವಾಡಲು ಹೊರಟರೆ ಆಗ ತನ್ನಲ್ಲಿರುವ ಆಹಾರ ಧಾನ್ಯಗಳ ದಾಸ್ತಾನನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೂಲಕ ಗ್ರಾಹಕರ ಹಿತ ಕಾಪಾಡುವ ಕೆಲಸವನ್ನೂ ಸರ್ಕಾರ ಮಾಡುತ್ತಿದೆ. ಆದರೆ, ಕೇರಳದಲ್ಲಿ ಆರಂಭಿಸಿರುವ ತರಕಾರಿಗೆ ಕನಿಷ್ಠ ಬೆಂಬಲ ಬೆಲೆ ನೀಡುವ ವ್ಯವಸ್ಥೆ ಸಂಪೂರ್ಣ ಇದೇ ಮಾದರಿಯಲ್ಲೇನೂ ಕೆಲಸ ಮಾಡುವುದಿಲ್ಲ. ಏಕೆಂದರೆ ತರಕಾರಿಗಳನ್ನು ಖರೀದಿಸಿ ದಾಸ್ತಾನು ಮಾಡಿಡಲು ಸಾಧ್ಯವಿಲ್ಲ. ಅದು ಕೊಳೆಯುವ ಪದಾರ್ಥವಾಗಿರುವುದರಿಂದ ತಕ್ಷಣ ಮಾರಾಟ ಮಾಡಬೇಕು. ಅಂದರೆ, ತರಕಾರಿಗೆ ಕನಿಷ್ಠ ಬೆಂಬಲ ಬೆಲೆಯನ್ನು ರೈತರ ಹಿತರಕ್ಷಣೆ ಮಾಡುವ ಏಕ ಮಾತ್ರ ಉದ್ದೇಶದಿಂದ ಜಾರಿಗೊಳಿಸಬೇಕಾಗುತ್ತದೆ.

**ತರಕಾರಿಗೆ ಬೆಲೆಯಿಲ್ಲ ಎಂದು ರಸ್ತೆ, ಚರಂಡಿಗೆ ಸುರಿಯುವ ರೈತರ ನೋವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ಹೀಗಾಗಿ ಕೇರಳದ ನಿರ್ಧಾರ ವಿಶಿಷ್ಟವಾಗಿದೆ.**

ಕೇರಳದಲ್ಲಿ 16 ರೀತಿಯ ತರಕಾರಿಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ರೈತರು ಆಯಾ ತರಕಾರಿ ಬೆಳೆಯಲು ಮಾಡುವ ವೆಚ್ಚಕ್ಕಿಂತ ಶೇ.20ರಷ್ಟು ಅಧಿಕ ಬೆಲೆ ನಿಗದಿಪಡಿಸಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಸರ್ಕಾರ ನಿಗದಿಪಡಿಸಿದ ಬೆಲೆಗಿಂತ ನಿರ್ದಿಷ್ಟ ತರಕಾರಿಯ ಬೆಲೆ ಸಗಟು ಖರೀದಿ ಮಾರುಕಟ್ಟೆಯಲ್ಲಿ ಇಳಿಕೆಯಾದರೆ ಆಗ ಸರ್ಕಾರ ಮಧ್ಯಪ್ರವೇಶ ಮಾಡಿ ರೈತರಿಂದ ಖರೀದಿಸುತ್ತದೆ. ಆಲೂಗಡ್ಡೆಗೆ ಪ್ರತಿ ಕೇಜಿಗೆ 28, ಬಾಳೆಹಣ್ಣಿಗೆ 30, ಗಜ್ಜರಿಗೆ 21 ಹೀಗೆ ರೈತರಿಗೆ ತೀರಾ ನಷ್ಟವಾಗದ ರೀತಿಯಲ್ಲೇ ಬೆಲೆ ನಿಗದಿಪಡಿಸಲಾಗಿದೆ. ಸಾಮಾನ್ಯವಾಗಿ ಸರ್ಕಾರ ಒಮ್ಮೆ ಯಾವುದಾದರೂ ಪದಾರ್ಥಕ್ಕೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿದರೆ ಮಾರುಕಟ್ಟೆಯಲ್ಲಿ ಅದಕ್ಕಿಂತ ಕಡಿಮೆಗೆ ಬೆಲೆ ಇಳಿಯುವುದಿಲ್ಲ. ಏಕೆಂದರೆ, ಬೆಲೆ ನಿಗದಿಪಡಿಸುವುದು ಯಾವಾಗಲೂ ವ್ಯಾಪಾರಿಗಳ ಕೂಟವೇ ಆಗಿರುವುದರಿಂದ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಗೆ ಖರೀದಿಸಿದರೆ ತಮಗೆ ತರಕಾರಿಗಳು ಸಿಗುವುದಿಲ್ಲ ಎಂಬ ಕಾರಣಕ್ಕಾದರೂ ಬೆಲೆ ಅದಕ್ಕಿಂತ ಕೆಳಗಿಳಿಯದಂತೆ ಅವರು ನೋಡಿಕೊಳ್ಳುತ್ತಾರೆ.

ತರಕಾರಿ ಬೆಳೆಗಾರರೂ ಸೇರಿದಂತೆ ಎಲ್ಲ ರೀತಿಯ ರೈತರು ದೇಶಾದ್ಯಂತ ಸಮಾನವಾಗಿ ಸಂಕಷ್ಟದಲ್ಲಿದ್ದಾರೆ. ಕರ್ನಾಟಕದಲ್ಲಿ ರೈತರು ವರ್ಷದಲ್ಲಿ ಮೂರ್ನಾಲ್ಕು ಬಾರಿಯಾದರೂ ಟೊಮೆಟೋವನ್ನು ಚರಂಡಿಗೆ ಸುರಿಯುವುದು, ಬೂದುಗುಂಬಳ, ಕಲ್ಲಂಗಡಿ, ಪಪ್ಪಾಯ ಅಥವಾ ಇತರ ತರಕಾರಿಗಳನ್ನು ರಸ್ತೆಗೆ ಸುರಿದು ಪ್ರತಿಭಟಿಸುವುದು ನಡೆಯುತ್ತಿರುತ್ತದೆ. ರೈತರ ಪರಿಸ್ಥಿತಿ ಸುಧಾರಿಸಬೇಕು ಅಂದರೆ ತರಕಾರಿ ಬೆಳೆಗಾರರಿಗೂ ಬೆಲೆಯ ಭದ್ರತೆ ಬೇಕು. ಎಲ್ಲ ತರಕಾರಿ ಬೆಳೆಗಾರರೂ ಕೇವಲ ಉಪ ಬೆಳೆಯಾಗಿ ತರಕಾರಿಗಳನ್ನು ಬೆಳೆಯುತ್ತಿರುವುದಿಲ್ಲ. ಅದನ್ನೇ ಮುಖ್ಯ ಬೆಳೆಯಾಗಿ ನಂಬಿಕೊಂಡವರೂ ಇರುತ್ತಾರೆ. ಹೀಗಾಗಿ ಕೇರಳದ ಯೋಜನೆಯನ್ನು ಅಧ್ಯಯನ ಮಾಡಿ ನಮ್ಮ ರಾಜ್ಯದಲ್ಲೂ ಜಾರಿಗೊಳಿಸಲು ಸಾಧ್ಯವೇ ಎಂಬ ಬಗ್ಗೆ ಸರ್ಕಾರ ಪರಿಶೀಲನೆ ನಡೆಸುವುದು ಒಳ್ಳೆಯದು. ದೇಶದಲ್ಲೇ ಮೊದಲ ಬಾರಿ ಕೃಷಿ ಬಜೆಟ್ ಮಂಡಿಸಿದ್ದ ರಾಜ್ಯಕ್ಕೆ ರೈತರಿಗೆ ಅನುಕೂಲ ಮಾಡಿಕೊಡುವ ಇನ್ನೊಂದು ಅವಕಾಶವಾಗಿ ಇದು ಒದಗಿಬರಬಹುದು. ಕೇಂದ್ರ ಸರ್ಕಾರ ಕೂಡ ದೇಶಾದ್ಯಂತ ಈ ಮಾದರಿಯನ್ನು ಅನುಸರಿಸಿ ತರಕಾರಿ ಬೆಳೆಗಾರರಿಗೆ ಭದ್ರತೆ ಒದಗಿಸಲು ಸಾಧ್ಯವೇ ಎಂಬ ಬಗ್ಗೆ ಪರಿಶೀಲಿಸಬೇಕಿದೆ.